# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 173 (288) |
| **ಸದಸ್ಯರ ಹೆಸರು** | : | ಶ್ರೀಮತಿ. ಹೇಮಲತಾ ನಾಯಕ (ವಿಧಾನಸಭೆಯಿಂದ ಚುನಾಯಿತರಾದವರು) |
| **ಉತ್ತರಿಸುವ ಸಚಿವರು** | : | ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |
| **ಉತ್ತರಿಸಬೇಕಾದ ದಿನಾಂಕ** | : | 09.12.2025 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ತೋಟಗಾರಿಕೆ ಇಲಾಖೆಯಡಿಯಲ್ಲಿ ರೈತರಿಗೆ ಯಾವ ಯಾವ ಯೋಜನೆಯಡಿ ಸೌಲಭ್ಯಗಳನ್ನು ಕಲ್ಪಿಸಲಾಗುತ್ತದೆ; (ವಿವರ ಒದಗಿಸುವುದು) | ತೋಟಗಾರಿಕೆ ಇಲಾಖೆಯಡಿಯಲ್ಲಿ ರೈತರಿಗೆ ಈ ಕೆಳಕಂಡ ಯೋಜನೆಗಳಡಿ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ.<br><br>1. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ<br>2. ರಾಷ್ಟ್ರೀಯ ತೋಟಗಾರಿಕೆ ಮಿಷನ್<br>3. ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ - ತಾಳೆ ಎಣ್ಣೆ<br>4. ಪರಂಪರಾಗತ ಕೃಷಿ ವಿಕಾಸ ಯೋಜನೆ<br>5. ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗೆ ತೆಂಗಿನಲ್ಲಿ ಸಂಯೋಜಿತ ಬೇಸಾಯ<br>6. ಕೃಷಿ ಯಾಂತ್ರೀಕರಣ ಉಪ ಅಭಿಯಾನ<br>7. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ<br>8. ಸಮಗ್ರ ತೋಟಗಾರಿಕಾ ಅಭಿವೃದ್ಧಿ<br>9. ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ<br>10. ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ<br>11. ಇಲಾಖಾ ಪ್ರಯೋಗ ಶಾಲೆ ಯೋಜನೆ<br>12. ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿ<br>13. ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ<br>14. ಬೆಳೆ ವಿಮೆ ಯೋಜನೆ<br><br>ಯೋಜನಾವಾರು ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ. |
| ಆ. | ವಿವಿಧ ತೋಟಗಾರಿಕೆ ಯೋಜನೆಗಳಡಿಯಲ್ಲಿ ಕೊಪ್ಪಳ ಜಿಲ್ಲೆಗೆ 2024-25ನೇ ಸಾಲಿನಿಂದ ಇಲ್ಲಿಯವರೆಗೆ ಸರ್ಕಾರ ನೀಡಿರುವ ಗುರಿ, ಸಾಧನೆ ಹಾಗೂ ಬಾಕಿ ವಿವರ ಒದಗಿಸುವುದು; | ವಿವಿಧ ತೋಟಗಾರಿಕೆ ಯೋಜನೆಗಳಡಿಯಲ್ಲಿ ಕೊಪ್ಪಳ ಜಿಲ್ಲೆಗೆ 2024-25ನೇ ಸಾಲಿನಿಂದ ಇಲ್ಲಿಯವರೆಗೆ ಸರ್ಕಾರ ನೀಡಿರುವ ಗುರಿ, ಸಾಧನೆ ಹಾಗೂ ಬಾಕಿ ವಿವರ ಈ ಕೆಳಕಂಡಂತಿದೆ;<br>**(ರೂ. ಲಕ್ಷಗಳಲ್ಲಿ)**<br>ವರ್ಷ \| ನೀಡಿರುವ ಗುರಿ \| ಬಿಡುಗಡೆ \| ಸಾಧನೆ<br>2024-25 \| 3545.82 \| 3545.82 \| 3406.45<br>2025-26 \| 4583.79 \| 2196.11 \| 1979.48<br>**ಒಟ್ಟು** \| **8129.61** \| **5741.93** \| **5385.93**<br><br>ವಿವರ ಅನುಬಂಧ-2 ರಲ್ಲಿ ಒದಗಿಸಿದೆ. |

| | | |
|---|---|---|
| ಇ. | ಈ ವರ್ಷದಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಬಾರಿ ಮಳೆಯಿಂದ ಎಷ್ಟು ಹೆಕ್ಟೇರ್ ತೋಟಗಾರಿಕೆ ಬೆಳೆಗಳ ನಷ್ಟವಾಗಿವೆ; ಅದರ ಅಂದಾಜು ಮೌಲ್ಯವೆಷ್ಟು; (ತಾಲ್ಲೂಕುವಾರು ಮಾಹಿತಿ ಒದಗಿಸುವುದು) | ಈ ವರ್ಷದಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಭಾರಿ ಮಳೆಯಿಂದ 144.48 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆ ಹಾನಿಯಾಗಿರುವುದಾಗಿ ವರದಿಯಾಗಿದ್ದು, ಅದರ ಅಂದಾಜು ಮೌಲ್ಯ ರೂ. 145.39 ಲಕ್ಷಗಳಾಗಿದೆ.<br>**ತಾಲ್ಲೂಕುವಾರು ಮಾಹಿತಿ ಈ ಕೆಳಗಿನಂತಿವೆ.** |

| ತಾಲ್ಲೂಕು | ಟೊಮ್ಯಾಟೋ | ಮೆಣಸಿನ ಕಾಯಿ | ಈರುಳ್ಳಿ | ದಾಳಿಂಬೆ | ಪಪ್ಪಾಯಿ | ಇತರೆ | ಒಟ್ಟು (ಹೆಕ್ಟೇರ್) |
|---|---|---|---|---|---|---|---|
| ಕೊಪ್ಪಳ | 0 | 0 | 30 | 0 | 0 | 2 | **32** |
| ಕುಷ್ಟಗಿ | 5 | 5 | 61 | 5 | 1 | 3 | **80** |
| ಯಲಬುರ್ಗಾ | 0 | 0 | 5 | 0 | 8 | 1 | **14** |
| ಕುಕನೂರು | 0 | 0 | 18 | 0 | 0 | 0 | **18** |
| **ಒಟ್ಟು** | **5** | **5** | **114** | **5** | **9** | **6** | **144** |

| | | |
|---|---|---|
| ಈ. | ಈ ನಷ್ಟಕ್ಕೆ ಸರ್ಕಾರದಿಂದ ಪಾವತಿಸಲಾಗಿರುವ ಪರಿಹಾರ ಧನ ಎಷ್ಟು; (ವಿವರ ಒದಗಿಸುವುದು) | ಈ ನಷ್ಟಕ್ಕೆ ಪಾವತಿಸಲಾಗಿರುವ ಪರಿಹಾರ ಧನ ರೂ. 25.78 ಲಕ್ಷಗಳು. ಒಟ್ಟು 302 ರೈತರಿಗೆ ಪರಿಹಾರವನ್ನು DBT ಮೂಲಕ ವಿತರಿಸಲಾಗಿರುತ್ತದೆ. |

**ಸಂಖ್ಯೆ: HORTI 526 HGM 2025**

**(ಎಸ್. ಎಸ್. ಮಲ್ಲಿಕಾರ್ಜುನ್)**
**ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು**



File No. HORTI/526/HGM/2025-admn-Horti-sec (Computer No. 1981366)
Generated from eOffice by NIJAGUNAMURTY NP, HORTI-ASST(NMP), ASSISTANT, SECRETARIAT - HORTICULTURE on 16/05/2026 03:03 PM